# ಸೌಂದರ್ಯ ಸೌಹಾರ್ದ ಕ್ರೆಡಿಟ್ ಕೋ- ಆಪರೇಟಿವ್ ಲಿಮಿಟೆಡ್

ನಂ.22 & 23, ಸೌಂದರ್ಯ ಸೌಧ, ಹೆಸರಘಟ್ಟ ಮುಖ್ಯರಸ್ತೆ, ನಾಗಸಂದ್ರ ಅಂಚೆ, ಬೆಂಗಳೂರು-560073

## ಅಧಿಸೂಚನೆ

ಸಹಕಾರಿಯ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ದಿನಾಂಕ : 18-03-2026 ರಿಂದ ಅನ್ವಯವಾಗುವಂತೆ ಅರ್ಜಿಗಳನ್ನು ಆಹ್ವಾನಿಸುವ ಕುರಿತು ಈಗಾಗಲೇ ಪತ್ರಿಕಾ ಪ್ರಕಟಣೆ ನೀಡಿದ್ದು, ಹುದ್ದೆಗಳ ವಿವರ ಮತ್ತು ಶರ್ತಗಳು ಈ ಕೆಳಗಿನಂತಿದೆ.

| ಕ್ರಮ ಸಂ | ಹುದ್ದೆಗಳ ಹೆಸರು | ಹುದ್ದೆ ಸಂಖ್ಯೆ | ವಿದ್ಯಾರ್ಹತೆ ಮತ್ತು ಅನುಭವ |
|---|---|---|---|
| 01 | ಮುಖ್ಯ ಕಾರ್ಯನಿರ್ವಣಾಧಿಕಾರಿ | 01 | ಅಂಗೀಕೃತ ವಿಶ್ವವಿದ್ಯಾಲಯದಿಂದ M.com / MBA-finance ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು. ಕಂಪ್ಯೂಟರ್ ಪರಿಣಿತಿ ಕಡ್ಡಾಯ. ಬ್ಯಾಂಕಿಂಗ್ ಅಥವಾ ಸಹಕಾರ ಕ್ಷೇತ್ರದಲ್ಲಿ ಕನಿಷ್ಠ10 ವರ್ಷ ಶಾಖಾ ವ್ಯವಸ್ಥಾಪಕ / ತತ್ಸಮಾನ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿರತಕ್ಕದ್ದು . ಸದರಿ ಹುದ್ದೆಗೆ ಗರಿಷ್ಠ ವಯೋಮಿತಿ 45 ವರ್ಷಗಳು |
| 02 | ವ್ಯವಸ್ಥಾಪಕ | 01 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು. . ಬಿ.ಕಾಂ/ ಬಿಬಿಎ/ ಎಂ.ಕಾಂ/ ಎಂ.ಬಿ.ಎ ಪದವಿಗೆ ಆದ್ಯತೆ. ಕಂಪ್ಯೂಟರ್ ಪರಿಣಿತಿ ಕಡ್ಡಾಯ. ಬ್ಯಾಂಕಿಂಗ್ ಅಥವಾ ಸಹಕಾರ ಕ್ಷೇತ್ರದಲ್ಲಿ ಕನಿಷ್ಠ5 ವರ್ಷ ಕೆಲಸ ನಿರ್ವಹಿಸಿದ ಅನುಭವ ಹೊಂದಿದವರಿಗೆ ಆದ್ಯತೆ. ಸದರಿ ಹುದ್ದೆಗೆ ಗರಿಷ್ಠ ವಯೋಮಿತಿ 40 ವರ್ಷಗಳು |
| 03 | ಹಿರಿಯ ಅಧಿಕಾರಿ | 02 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು. ಬಿ.ಕಾಂ/ ಬಿಬಿಎ/ ಎಂ.ಕಾಂ/ ಎಂ.ಬಿ.ಎ ಪದವಿಗೆ ಆದ್ಯತೆ. ಕಂಪ್ಯೂಟರ್ ಪರಿಣಿತಿ ಕಡ್ಡಾಯ. ಬ್ಯಾಂಕಿಂಗ್ ಅಥವಾ ಸಹಕಾರ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿದ ಅನುಭವ ಹೊಂದಿದವರಿಗೆ ಆದ್ಯತೆ. ಸದರಿ ಹುದ್ದೆಗೆ ಗರಿಷ್ಠ ವಯೋಮಿತಿ 35 ವರ್ಷಗಳು |
| 04 | ಕಿರಿಯ ಅಧಿಕಾರಿ | 03 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು. ಬಿ.ಕಾಂ/ ಬಿಬಿಎ ಪದವಿಗೆ ಆದ್ಯತೆ. ಕಂಪ್ಯೂಟರ್ ಪರಿಣಿತಿ ಕಡ್ಡಾಯ. ಸದರಿ ಹುದ್ದೆಗೆ ಗರಿಷ್ಠ ವಯೋಮಿತಿ 30 ವರ್ಷಗಳು |

**ಗಮನಕ್ಕಾಗಿ :**

1. ಈ ಮೇಲಿನ ಎಲ್ಲಾ ಹುದ್ದೆಗಳಿಗೆ ಕನ್ನಡ ಓದುವ, ಬರೆಯುವ ಮಾತನಾಡುವ ಭಾಷಾ ಜ್ಞಾನ ಕಡ್ಡಾಯ.

2. ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಬಂಧಿಸಿದ ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆಗಳನ್ನು ಅಭ್ಯರ್ಥಿಗಳು ಹೊಂದಿರಬೇಕು.

3. ಒಬ್ಬ ಅಭ್ಯರ್ಥಿಯು ಕೇವಲ ಒಂದು ಹುದ್ದೆಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು

## ನೇಮಕಾತಿ ಪ್ರಕ್ರಿಯೆಯ ವಿವರಗಳು

1. **ಅರ್ಜಿ ಸಲ್ಲಿಸುವ ವಿಧಾನ**:

   1) ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಸೌಂದರ್ಯ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್ ಇದರ ಅಧಿಕೃತ ವೆಬ್ ಸೈಟ್ www.soundaryasouhardha.com ನಿಂದ ಡೌನ್‌ಲೋಡ್ ಮಾಡಿಕೊಂಡು ಪೂರ್ತಿಯಾಗಿ ಭರ್ತಿ ಮಾಡಿ, ಈ ವಿಳಾಸಕ್ಕೆ " ಸೌಂದರ್ಯ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್" ನಂ.22 & 23, ಸೌಂದರ್ಯ ಸೌಧ, ಹೆಸರಘಟ್ಟ ಮುಖ್ಯರಸ್ತೆ, ನಾಗಸಂದ್ರ ಅಂಚೆ, ಬೆಂಗಳೂರು-560073 ಇಲ್ಲಿಗೆ ತಲುಪುವಂತೆ ಅರ್ಜಿಗಳನ್ನು ದಿ: 05-04-2026 ರ ಒಳಗಾಗಿ ಕಳುಹಿಸತಕ್ಕದ್ದು. ಅಥವಾ ಅರ್ಜಿ ಮತ್ತು ಸಂಬಂಧ ಪಟ್ಟ ದಾಖಲೆಗಳೊಂದಿಗೆ ಸಹಕಾರಿಯ ಅಧಿಕೃತ E mail ID: soundaryasouhardha@gmail.com ಗೆ ಕಳುಹಿಸಬಹುದು.

   2) ಅರ್ಜಿಯಲ್ಲಿ ನಮೂದಿಸುವ ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ನೇಮಕಾತಿ ಪ್ರಕ್ರಿಯೆಯ ಸಂವಹನಕ್ಕೆ ಪರಿಗಣಿಸಲಾಗುವುದು.

   3) ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ವಯವೇ ಅರ್ಜಿಗಳನ್ನು ಪೂರ್ತಿಯಾಗಿ ಭರ್ತಿ ಮಾಡತಕ್ಕದ್ದು. ಅಪೂರ್ಣ ಹಾಗೂ ತಪ್ಪು ಮಾಹಿತಿಗಳನ್ನೊಳಗೊಂಡ ಅಥವಾ ನಿಗದಿತ ಸಮಯದ ನಂತರ ತಲುಪಿದ ಅರ್ಜಿಗಳನ್ನು ಕಾರಣ ನೀಡದೆ ತಿರಸ್ಕರಿಸಲಾಗುವುದು.

**2. ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು**

1) ಹುದ್ದೆಗೆ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಪೂರ್ಣವಾಗಿ ಭರ್ತಿ ಮಾಡಿರುವ ಅರ್ಜಿ.

2) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಗಳನ್ನು ರುಜುವಾತು ಪಡಿಸುವ ದಾಖಲಾತಿಗಳು **(ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಪಟ್ಟಿಗಳು ಹಾಗೂ ಘಟಿಕೋತ್ಸವದ ಪ್ರಮಾಣ ಪತ್ರಗಳ ಸ್ವಯಂ ದೃಢೀಕರಿಸಿದ ಪ್ರತಿಗಳನ್ನು ಲಗತ್ತಿಸಬೇಕು)**

3) ಕಂಪ್ಯೂಟರ್ ಜ್ಞಾನವನ್ನು ಹೊಂದಿರುವ ಕುರಿತು ಸ್ವಯಂ ದೃಢೀಕರಿಸಿದ ದಾಖಲಾತಿ.

**3 . ಆಯ್ಕೆ ವಿಧಾನ**

1) ಎಲ್ಲಾ ಹುದ್ದೆಗಳಿಗೂ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ.

2) ಲಿಖಿತ ಪರೀಕ್ಷೆ ಹಾಗೂ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಬೇಕು.

3) ಎಲ್ಲಾ ಹುದ್ದೆಗಳಿಗೂ ಪರೀಕ್ಷಾ ಕೇಂದ್ರ ಬೆಂಗಳೂರು ಆಗಿರುತ್ತದೆ.

## 4. ವೇತನದ ವಿವರ

| ಕ್ರ.ಸಂ | ಹುದ್ದೆಗಳ ವಿವರ | ಕ್ರೋಢೀಕೃತ ವೇತನ |
|---|---|---|
| 1 | ಮುಖ್ಯ ಕಾರ್ಯನಿರ್ವಣಾಧಿಕಾರಿ | **Rs.65,000.00** |
| 2 | ಶಾಖಾ ವ್ಯವಸ್ಥಾಪಕರು | **Rs.45,000.00** |
| 3 | ಹಿರಿಯ ಅಧಿಕಾರಿ | **Rs.30,000.00** |
| 4 | ಕಿರಿಯ ಅಧಿಕಾರಿ | **Rs.25,000.00** |

## 5. ಅರ್ಹತಾ ಷರತ್ತುಗಳು

1) ಅಭ್ಯರ್ಥಿಯು ಭಾರತೀಯ ನಾಗರೀಕನಾಗಿರತಕ್ಕದ್ದು.

2) ಒಬ್ಬ ಅಭ್ಯರ್ಥಿಯು ನೈಜ ವ್ಯಕ್ತಿಯಾಗಿಲ್ಲವೆಂದು, ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ / ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತಃ ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೇ, ಹುದ್ದೆಯ ಸಂದರ್ಶನದಿಂದ /ಆಯ್ಕೆಯಿಂದ ಅಭ್ಯರ್ಥಿಯನ್ನು ರದ್ದುಪಡಿಸಲಾಗುವುದು.

ಸಹಿ/-

ಮುಖ್ಯ ಕಾರ್ಯನಿರ್ವಹಣಾಧಿಕಾರಿ